ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿ:**16-12-2020** ರಂದು ನಡೆದ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ **12**ನೇ ಸಭೆಯ ನಡವಳಿಗಳು

ಸಮಯ: ಅಪರಾಹ್ನ 2:00 ಘಂಟೆಗೆ
KSWAN - Video Conference ಮೂಲಕ ಸಭೆಯನ್ನು ನಡೆಸಲಾಗಿದೆ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಲಗತ್ತಿಸಿದೆ.

ಮಾನ್ಯ ಮುಖ್ಯ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ, ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು.

1. **ಕ.ರಾ.ರ.ಸು.ಪ್ರಾಧಿಕಾರದಲ್ಲಿ ಖಾಲಿಯಿರುವ ಹಣಕಾಸು ಅಧಿಕಾರಿ ಹುದ್ದೆಗೆ** ಆರ್ಥಿಕ ಇಲಾಖೆಯಿಂದ ಅಧಿಕಾರಿಯನ್ನು ನಿಯೋಜಿಸುವ ಬಗ್ಗೆ ಆರ್ಥಿಕ ಇಲಾಖೆಯು ತ್ವರಿತವಾಗಿ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧ್ಯಕ್ಷರು ಸೂಚಿಸಿದರು. **ಕ್ರಮ: ಆರ್ಥಿಕ ಇಲಾಖೆ**

2. **ಪೊಲೀಸ್ ಇಲಾಖೆಗೆ ಅನುದಾನ ಬಿಡುಗಡೆ:** ಸಾರಿಗೆ ಸಚಿವಾಲಯದ ಸರ್ಕಾರದ ಆದೇಶ ಸಂಖ್ಯೆ:ಟಿಡಿ:137:2020, ದಿ:24-08-2020 ರ ಆದೇಶದನ್ವಯ ಪೊಲೀಸ್ ಇಲಾಖೆಗೆ ಮೊದಲ ಕಂತಿನಲ್ಲಿ ರೂ.12.50 ಕೋಟಿಗಳ ಅನುದಾನ ಬಿಡುಗಡೆಗೊಳಿಸುವ ಪ್ರಕ್ರಿಯೆಯಲ್ಲಿ ಈಗಾಗಲೇ ನಾಲ್ಕು ತಿಂಗಳ ಕಾಲಾವಧಿ ವಿಳಂಬವಾಗಿದ್ದು, ಉಂಟಾಗಿರುವ ತಾಂತ್ರಿಕ ದೋಷವನ್ನು ಕೂಡಲೇ ಇತ್ಯರ್ಥಪಡಿಸುವ ಸಂಬಂಧ ಮಹಾಲೇಖಪಾಲರು (ಎ & ಇ) ಕಛೇರಿ, ಹಣಕಾಸು ಇಲಾಖೆ, ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನೆ ಇಲಾಖೆಗಳ ಮುಖ್ಯಸ್ಥರುಗಳೊಂದಿಗೆ ಸಭೆಯನ್ನು ನಡೆಸಿ ಸೂಕ್ತ ನಿರ್ಣಯದೊಂದಿಗೆ ಅನುದಾನ ಬಿಡುಗಡೆಗೊಳಿಸಲು ಪ್ರಾಧಿಕಾರ ಸೂಚಿಸಿತು. **ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ.**

3. **ಪೊಲೀಸ್ ಇಲಾಖೆಯ ಕ್ರಿಯಾ ಯೋಜನೆಯ ಅನುಷ್ಠಾನ:** ಪೊಲೀಸ್ ಇಲಾಖೆಯ ರೂ.100 ಕೋಟಿಗಳ ಕ್ರಿಯಾ ಯೋಜನೆಯನ್ನು ಪ್ರಾಧಿಕಾರದ ಈ ಹಿಂದಿನ ಸಭೆಗಳಲ್ಲಿ ಅನುಮೋದಿಸಲಾಗಿರುತ್ತದೆ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ರವರು ಈ ಬಗ್ಗೆ ಅನುಸರಣಾ ಕ್ರಮವನ್ನು ಕೈಗೊಂಡು ಕ್ರಿಯಾ ಯೋಜನೆಯ ರೀತ್ಯಾ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಟೆಂಡರ್ ಪ್ರಕ್ರಿಯೆಯ ಮೂಲಕ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆಯನ್ನು ತ್ವರಿತವಾಗಿ ನೀಡುವಂತೆ ಪ್ರಾಧಿಕಾರ ಸೂಚಿಸಿತು.

   ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕೊನೆಯ ತ್ರೈಮಾಸಿಕ ಅವಧಿಯು ಮಾತ್ರ ಬಾಕಿಯಿದ್ದು, ವರ್ಷಾಂತ್ಯದೊಳಗಾಗಿ ಕಾರ್ಯಕ್ರಮಗಳ ಅನುಷ್ಠಾನವಾಗಬೇಕಾಗಿದೆ. ಈ ನಿಟ್ಟಿನಲ್ಲಿ ಟೆಂಡರ್ ಪ್ರಕ್ರಿಯೆಯ ಪೂರ್ವಭಾವಿ ಕ್ರಮಗಳನ್ನು ಸಿದ್ಧಪಡಿಸಿಕೊಳ್ಳುತ್ತಿರುವುದಾಗಿ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಈ ಕೆಳಕಂಡ ಅಂಶಗಳನ್ನು ಅಧ್ಯಕ್ಷರ ಗಮನಕ್ಕೆ ತಂದರು.

   - ರಾಜ್ಯದಲ್ಲಿ ಟ್ರಾಫಿಕ್ ನಿಯಂತ್ರಣ ವ್ಯವಸ್ಥೆಯ ವಾರ್ಷಿಕ ಕಾರ್ಯನಿರ್ವಹಣೆ (recurring expenditure) ವೆಚ್ಚಗಳಿಗೆ ಪ್ರಸಕ್ತ ಸಾಲಿನಲ್ಲಿ ರೂ.27.00 ಕೋಟಿಗಳ ಅನುದಾನವನ್ನು ಮೀಸಲಿಡಲಾಗಿದೆ. ಈ ಸಂಬಂಧ ಈಗಾಗಲೇ ಎರಡನೇ ಕಂತಿನಲ್ಲಿ ಬಿಡುಗಡೆಗೊಳಿಸಿರುವ ರೂ.12.50 ಕೋಟಿಗಳ ಅನುದಾನವನ್ನು ವಿನಿಯೋಗಿಸಿದ್ದು, ಈವರೆಗೂ ಶೇ.23 ರಷ್ಟು ಮಾತ್ರ ಬಳಕೆ ಮಾಡಲಾಗಿರುತ್ತದೆ. ಕೂಡಲೇ ಅನುದಾನವನ್ನು ಬಳಸಿ, ಹಣ ಬಳಕೆ ಪ್ರಮಾಣಪತ್ರಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸುವುದಾಗಿ ಸಭೆಯ ಗಮನಕ್ಕೆ ತರಲಾಯಿತು.

   - ಸಂಚಾರ ನಿಯಂತ್ರಣ ಮತ್ತು ಪ್ರವರ್ತನ ಚಟುವಟಿಕೆಗಳಿಗೆ ಅಗತ್ಯವಿರುವ ಉಪಕರಣಗಳು & ಸಲಕರಣೆಗಳನ್ನು GeM portal ನಲ್ಲಿ ಖರೀದಿಸಲು ಕ್ರಮಕೈಗೊಳ್ಳಲಾಗುತ್ತಿದೆ.

- ಕಳೆದ 2019-20 ನೇ ಆರ್ಥಿಕ ಸಾಲಿನಲ್ಲಿ ಬೆಂಗಳೂರು ನಗರದ ಸಂಚಾರ ಬಲವರ್ಧನೆಗೆ ರೂಪಿಸಲಾಗಿದ್ದ ರೂ.30 ಕೋಟಿಗಳ ಕ್ರಿಯಾ ಯೋಜನೆಗೆ ಒಳಾಡಳಿತ ಇಲಾಖೆಯ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ:11:ಇಎಫ್‌ಎಸ್:2019, ದಿ:13-02-2020 ರಲ್ಲಿ ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ ಸಂಗ್ರಹಿಸಲಾದ ದಂಡದ ಮೊತ್ತ ರೂ.60,67,72,570-00 ಗಳಾಗಿದ್ದು, ಈ ಪೈಕಿ ಶೇ.50 ರಷ್ಟು ಅಂದರೆ ಅಂದಾಜು ರೂ.30.00 ಕೋಟಿಗಳನ್ನು ವ್ಯಯ ಮಾಡಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿರುತ್ತದೆ ಹಾಗೂ ಸದರಿ ಕ್ರಿಯಾ ಯೋಜನೆಯ ಪ್ರಸ್ತಾವನೆಗೆ ಟೆಂಡರ್ ಪ್ರಕ್ರಿಯೆಯನ್ನು ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಇವರ ಹಂತದಲ್ಲಿ ಪ್ರಾರಂಭಿಸಲು ಅನುಮತಿಸಲಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ ನಂತರದಲ್ಲಿ ಸರ್ಕಾರದ ಹಂತದಲ್ಲಿ ಲಭ್ಯವಿರುವ ಅನುದಾನವನ್ನು ಬಿಡುಗಡೆಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಲಾಗಿದೆ.

  ಸದರಿ ಕ್ರಿಯಾ ಯೋಜನೆಯ ರೀತ್ಯಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ರಸ್ತೆ ಸುರಕ್ಷತಾ ನಿಧಿಯಿಂದ 2020-21ನೇ ಸಾಲಿನಲ್ಲಿ ಬಿಡುಗಡೆಗೊಳಿಸಲಾಗುವ ಅನುದಾನವನ್ನು ವಿನಿಯೋಗಿಸಲಾಗುವುದು. ಅಗತ್ಯವಿರುವ ಕಡೆ ನಿಯಮಾನುಸಾರ KRDCL ರವರ ಸೇವೆಯನ್ನು ತೊಡಗಿಸಿಕೊಂಡು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ ಎಂದು ಜಂಟಿ ಪೊಲೀಸ್ ಆಯುಕ್ತರು (ಸಂಚಾರ) ರವರು ಸಭೆಯ ಗಮನಕ್ಕೆ ತಂದರು. KRDCL ಮುಖೇನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಆರ್ಥಿಕ ಇಲಾಖೆಯ ಸಮಹತಿಯ ಮೇರೆಗೆ ಸರ್ಕಾರದ ಸೂಕ್ತ ಅನುಮೋದನೆಯನ್ನು ಪಡೆಯುವುದು ಸಮಂಜಸವಾಗಿರುತ್ತದೆ.

- ಬ್ಲಾಕ್‌ಸ್ಪಾಟ್‌ಗಳಲ್ಲಿ Automated Highway Traffic Enforcement System ಅನ್ನು ಅನುಷ್ಠಾನಗೊಳಿಸಲಾಗುವುದು. **ಕ್ರಮ: ಪೊಲೀಸ್‌ಇಲಾಖೆ**

4. **ಕಪ್ಪುಚುಕ್ಕೆ ಸರಿಪಡಿಸುವಿಕೆ ಕಾರ್ಯಗಳು:**

ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿನ ಬಾಕಿಯಿರುವ 63 ಕಪ್ಪುಚುಕ್ಕೆ ಸ್ಥಳಗಳ ಸರಿಪಡಿಸುವಿಕೆಗಾಗಿ ರೂ.43.00 ಕೋಟಿಗಳ ಹೆಚ್ಚುವರಿ ಅನುದಾನವನ್ನು ಬಿಡುಗಡೆಗೊಳಿಸುವಂತೆ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಸದರಿ ಪ್ರಸ್ತಾವನೆಯು ತಿರಸ್ಕೃತಗೊಂಡಿರುತ್ತದೆ. ಧನ ಪುನರ್ ವಿನಿಯೋಗಿಸಲು ಲೋಕೋಪಯೋಗಿ ಇಲಾಖೆಯಲ್ಲಿ ಯಾವುದೇ ಹಣ ಉಳಿತಾಯವಿರುವುದಿಲ್ಲ. ಸದರಿ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಮರುಮಂಡಿಸಲಾಗಿದೆ. ಅವಶ್ಯಕವಿರುವ ಅನುದಾನಕ್ಕೆ ಶೇ. 33 ರಷ್ಟು ಅನುದಾನದ ಲಭ್ಯತೆಯನ್ನು ಲಭ್ಯವಿರುವ ಅನುದಾನದಲ್ಲಿ ಕಂಡುಕೊಂಡು ಸದರಿ ಪ್ರಸ್ತಾವನೆಯನ್ನು ಅನುಮೋದಿಸುವ ಸಂಬಂಧ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧ್ಯಕ್ಷರು ಸೂಚಿಸಿದರು.
**ಕ್ರಮ: ಲೋಕೋಪಯೋಗಿ ಇಲಾಖೆ, ಆರ್ಥಿಕ ಇಲಾಖೆ.**

5. **ರಾಷ್ಟ್ರೀಯ ಹೆದ್ದಾರಿ (ರಾಜ್ಯ ವಲಯ)**

| ಒಟ್ಟು ಕಪ್ಪುಚುಕ್ಕೆ ಸ್ಥಳಗಳು | ಸರಿಪಡಿಸಿರುವ ಸ್ಥಳಗಳು | ಪ್ರಗತಿಯಲ್ಲಿರುವ ಕಾಮಗಾರಿಗಳು | ಬಾಕಿಯಿರುವ ಸ್ಥಳಗಳಿಗೆ MoRTH ವತಿಯಿಂದ ಮಂಜೂರಾತಿ ದೊರೆತಿದ್ದು, ಟೆಂಡರ್ ಪ್ರಕ್ರಿಯೆಗಳು ಪ್ರಗತಿಯಲ್ಲಿವೆ. |
|---|---|---|---|
| 225 | 60 | 73 | |

**ಕ್ರಮ: ಮುಖ್ಯ ಅಭಿಯಂತರರು, ರಾಷ್ಟ್ರೀಯ ಹೆದ್ದಾರಿ (ರಾಜ್ಯ ವಲಯ)**

6. ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬಾಕಿಯಿರುವ 138 ಕಪ್ಪುಚುಕ್ಕೆ ಸ್ಥಳಗಳ ಸರಿಪಡಿಸುವಿಕೆಗಾಗಿ MoRTH ವತಿಯಿಂದ ಮಂಜೂರಾತಿಯನ್ನು ನಿರೀಕ್ಷಿಸಲಾಗುತ್ತಿದೆ.